## ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-01

ಸಂಖ್ಯೆ: ಕ.ಲೋ.ಸೇ.ಆ/321/ಪ.ಶಾ(3)/2019-20/4530 ದಿನಾಂಕ: 25/11/2022

### ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ: ಇ(3)800/2019-20/ಪಿಎಸ್‌ಸಿ ಮತ್ತು ಇ(3)801/2019-20/ಪಿಎಸ್‌ಸಿ, ದಿನಾಂಕ:29-02-2020 ಹಾಗೂ ಸೇರ್ಪಡೆ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ/ಇ(3)4(A)/2020-21, ದಿನಾಂಕ:14-05-2020ರಲ್ಲಿ ಅಧಿಸೂಚಿಸಲಾದ ರಾಜ್ಯದ ವಿವಿಧ ಇಲಾಖೆಗಳಲ್ಲಿನ **ಉಳಿಕೆ ಮೂಲ ವೃಂದದ-1122 ಮತ್ತು ಹೈದ್ರಬಾದ್-ಕರ್ನಾಟಕ ವೃಂದದ 201 ಕಿರಿಯ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ ಕಟ್-ಆಫ್ ಅಂಕಗಳ ಪಟ್ಟಿಯನ್ನು ದಿನಾಂಕ: 25-11-2022ರಂದು ಆಯೋಗದ ವೆಬ್‌ಸೈಟ್** http://kpsc.kar.nic.in ರಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಸದರಿ ತಾತ್ಕಾಲಿಕ ಆಯ್ಕೆಪಟ್ಟಿಗೆ ಸಂಬಂಧಿಸಿದಂತೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಆಯ್ಕೆಪಟ್ಟಿ ಪ್ರಕಟಿಸಿದ ದಿನಾಂಕದಿಂದ 07 ದಿನಗಳೊಳಗಾಗಿ ಲಿಖಿತ ರೂಪದಲ್ಲಿ ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-01, ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಸೂಚಿಸಿದೆ. ಸದರಿ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿನ ಟಿಪ್ಪಣಿಯಲ್ಲಿ ಕೆಲವೊಂದು ಮಾಹಿತಿಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ನಮೂದಿಸಲಾಗಿರುತ್ತದೆ, ವಿವರಗಳು ಈ ಕೆಳಕಂಡಂತಿವೆ.

1. ಮೂಲ ದಾಖಲೆಗಳ ಪರಿಶೀಲನಾ ಸಮಯದಲ್ಲಿ ಮೂಲ ದಾಖಲೆಗಳನ್ನು ಸಲ್ಲಿಸದಿರುವ ಅಭ್ಯರ್ಥಿಗಳನ್ನು, ಅವರುಗಳು ಆನ್ ಲೈನ್ ಅರ್ಜಿಯೊಂದಿಗೆ ಅಪ್ ಲೋಡ್ ಮಾಡಿದ್ದ ದಾಖಲೆಗಳನ್ನು ಪರಿಗಣಿಸಿ, ಇಲಾಖೆಯವರು ಮೂಲ ದಾಖಲೆಗಳ ನೈಜತೆಯನ್ನು ಪರಿಶೀಲಿಸುವ ಷರತ್ತಿಗೊಳಪಟ್ಟಂತೆ ಆಯ್ಕೆಗೆ ಪರಿಗಣಿಸಲಾಗಿರುತ್ತದೆ. ಮೇಲ್ಕಂಡ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಅಂತಹ ಅಭ್ಯರ್ಥಿಗಳು ಆಯ್ಕೆಯಾಗಿದ್ದಲ್ಲಿ ಅವರು ಆಯ್ಕೆಯಾಗಿರುವ ಮೀಸಲಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು/ಇನ್ನಿತರ ದಾಖಲೆಗಳನ್ನು ನೇಮಕಾತಿ ಪ್ರಾಧಿಕಾರಕ್ಕೆ ಒದಗಿಸಲು ಸಾಧ್ಯವಾಗದಿರುವ ಅಭ್ಯರ್ಥಿಗಳು ಆ ಸಂಬಂಧ ಆಕ್ಷೇಪಣೆಯಲ್ಲಿ ತಿಳಿಸಿದಲ್ಲಿ, ಅಂತಿಮ ಆಯ್ಕೆಪಟ್ಟಿಯಲ್ಲಿ ಸರಿಪಡಿಸಲಾಗುವುದೆಂದು ತಿಳಿಸಿದೆ. ಒಂದುವೇಳೆ ತಿಳಿಸಲು ವಿಫಲರಾದಲ್ಲಿ ಅಂತಿಮ ಆಯ್ಕೆಪಟ್ಟಿ ಪ್ರಕಟಗೊಂಡ ನಂತರ ಯಾವುದೇ ರೀತಿಯ ಬದಲಾವಣೆಗೆ ಅವಕಾಶವಿರುವುದಿಲ್ಲವೆಂದು ಈ ಮೂಲಕ ತಿಳಿಸಿದೆ.
2. ಮೇಲ್ಕಂಡ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಉಳಿಕೆ **ಮೂಲ ವೃಂದ ಮತ್ತು ಹೈದ್ರಬಾದ್-ಕರ್ನಾಟಕ ವೃಂದದ ಎರಡು ಹುದ್ದೆಗಳಿಗೆ** ಆಯ್ಕೆಯಾಗಿರುವ ಅಭ್ಯರ್ಥಿಗಳು ಯಾವುದಾರೂ ಒಂದು ವೃಂದದ ಹುದ್ದೆಯನ್ನು ಬಿಟ್ಟುಕೊಡಲು ಇಚ್ಛಿಸಿದಲ್ಲಿ ಅವರು ಆಕ್ಷೇಪಣೆ ಸಲ್ಲಿಸಲು ನಿಗದಿ ಪಡಿಸಿರುವ ಕಾಲಾವಧಿಯೊಳಗೆ ಆಯೋಗಕ್ಕೆ ಸದರಿ ಹುದ್ದೆಗೆ ಅರ್ಜಿ ಸಲ್ಲಿಸಿದ **ಆನ್ ಲೈನ್ ಪೋರ್ಟಲ್** ಮೂಲಕ ಮನವಿ ಸಲ್ಲಿಸುವಂತೆ ತಿಳಿಸಿದೆ.
3. ಮೇಲ್ಕಂಡ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆ ಹೊಂದಿರುವ ಅಭ್ಯರ್ಥಿಗಳು ಈಗಾಗಲೇ **ಆಯೋಗದಿಂದ ಪ್ರಥಮ** ದರ್ಜೆ ಸಹಾಯಕರ ಹುದ್ದೆಯಲ್ಲಿ **ಆಯ್ಕೆ ಹೊಂದಿದ್ದರೆ** ಅವರುಗಳು ಪ್ರಸ್ತುತ ಆಯ್ಕೆ ಹೊಂದಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಬಿಟ್ಟುಕೊಡಲು ಇಚ್ಛಿಸಿದಲ್ಲಿ ಅವರು ಆಕ್ಷೇಪಣೆ ಸಲ್ಲಿಸಲು ನಿಗದಿ ಪಡಿಸಿರುವ ಕಾಲಾವಧಿಯೊಳಗೆ ಆಯೋಗಕ್ಕೆ ಸದರಿ ಹುದ್ದೆಗೆ ಅರ್ಜಿ ಸಲ್ಲಿಸಿದ **ಆನ್ ಲೈನ್ ಪೋರ್ಟಲ್ ಮೂಲಕ** ಮನವಿ ಸಲ್ಲಿಸುವಂತೆ ಕೋರಿದೆ.
4. ಮೇಲ್ಕಂಡ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆ ಹೊಂದಿರುವ ಅಭ್ಯರ್ಥಿಗಳು ಈಗಾಗಲೇ **ಇನ್ನಿತರ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ,** ಅವರುಗಳು ಪ್ರಸ್ತುತ ಆಯ್ಕೆ ಹೊಂದಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಬಿಟ್ಟುಕೊಡಲು ಇಚ್ಛಿಸಿದಲ್ಲಿ ಅವರು ಆಕ್ಷೇಪಣೆ ಸಲ್ಲಿಸಲು ನಿಗದಿ ಪಡಿಸಿರುವ ಕಾಲಾವಧಿಯೊಳಗೆ **ಖುದ್ದಾಗಿ ಆಯೋಗಕ್ಕೆ** ಮನವಿ ಸಲ್ಲಿಸುವಂತೆ ಕೋರಿದೆ.

ಮೇಲ್ಕಂಡ ಕ್ರಮ ಸಂಖ್ಯೆ- **2 & 3**ಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ಪೋರ್ಟಲ್ ಮೂಲಕ Willingness ಸಲ್ಲಿಸುವ ಅಭ್ಯರ್ಥಿಗಳಿಗೆ ಆಯೋಗದ ವೆಬ್‌ಸೈಟ್ ನಲ್ಲಿ Willingness Form Linkನ್ನು ಬಿಡಲಾಗಿದೆ.

(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.